





ಈ ಸಾಮಾನ್ಯ ಮಣ್ಣಿನ ಮಡಿಕೆಗೆ ಬಣ್ಣ ತುಂಬಿ ಒಂದು ಉತ್ತಮ ಕಲಾಕೃತಿಗಳನ್ನಾಗಿ ಮಾಡಿದವರು ಕಲಾವಿದೆ ಶಿಕ್ಷಕಿ ರಂಜನಾ ದುರ್ಗೇಶ್ ಶೆಟ್ಟಿಗಾರ್. ಇವರು ಮಂಗಳೂರು ಸಮೀಪದ ಸುರತ್ಕಲ್ ಹಳೆ ಅಂಗಡಿಯ ನಿವಾಸಿ. ಇಲ್ಲಿನ ಕಾಟಿಪಳ್ಳದ ಸರ್ಕಾರಿ ಶಾಲೆಯಲ್ಲಿ ಕಲಾಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ತಮ್ಮ ಒಡಲಲ್ಲಿರುವ ಕಲಾಸಕ್ತಿಯನ್ನು ಹೇಗೆ ಅನಾವರಣಗೊಳಿಸಬಹುದು; ಕಲೆಯನ್ನು ಹೇಗೆ ಅತ್ಯಾಕರ್ಷಕವಾಗಿ ಮಾಡಬಹುದು ಎಂಬುದರ ಆಲೋಚನೆಯಲ್ಲಿದ್ದಾಗ ಇವರಿಗೆ ಹೊಳೆದಿದ್ದು ಸಾಮಾನ್ಯವಾಗಿ ಸಿಗುವ ಮಣ್ಣಿನ ಮಡಿಕೆಗೆ ಬಣ್ಣ ಹಚ್ಚುವ ಕಾಯಕ!

ಪ್ರಕೃತಿಯಲ್ಲಿರುವ ಗಿಡ, ಮರ, ಬಳ್ಳಿ, ಪ್ರಾಣಿ ಪಕ್ಷಿ ಮತ್ತು ಪ್ರಕೃತಿಯ ವಿಭಿನ್ನ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಮಡಿಕೆಗಳ ಮೇಲೆ ವಿಭಿನ್ನ ಚಿತ್ತಾರಗಳನ್ನು ಬಿಡಿಸುತ್ತ ಬಂದಿದ್ದಾರೆ. ಇದರಿಂದ ಸಾಮಾನ್ಯ ಮಡಿಕೆ ಕೂಡ ಅದ್ಭುತ ಕಲಾತ್ಮಕ ನೋಟದಲ್ಲಿ ಕಂಗೊಳಿಸುತ್ತಿದೆ. ಇವರು ಮಾರುಕಟ್ಟೆಯಲ್ಲಿ ಸಿಗುವ ಮಣ್ಣಿನ ಮಡಿಕೆಗಳಲ್ಲಿ ಅಥವಾ ಐಸ್‌ಕ್ರೀಮ್ ಪಾಟ್‌ಗಳನ್ನು ಬಳಸಿ ಕಲಾತ್ಮಕವಾಗಿ ವಿವಿಧ ಬಣ್ಣಗಳಿಂದ ಚಿತ್ರಿಸುತ್ತಾರೆ. ಇಲ್ಲಿನ ಶಾಲಾ ವಿದ್ಯಾರ್ಥಿಗಳಿಗೆ ಇಂತಹ ವಸ್ತುಗಳನ್ನು ಬಳಸಿಕೊಂಡು ವಿಭಿನ್ನ ನೋಟವನ್ನು ಬೀರುವ ಕಲಾ ತರಗತಿಗಳನ್ನು ಪರಿಚಯ ಮಾಡಿ ಮಕ್ಕಳಲ್ಲಿ ಹೊಸತನದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ.

ಮಡಿಕೆ ಮೇಲೆ ಪೈಂಟಿಂಗ್ ಮಾಡುವುದು ಹೇಗೆ? ಎಂಬ ಆಸಕ್ತಿ ಇತರ ಕಲಾಸಕ್ತರಿಗೂ ಇದ್ದರೆ ಹೀಗೆ ಮಾಡಿ. ಒಂದು ಸಣ್ಣ ಗಾತ್ರದ ಮಡಿಕೆ ತೆಗೆದುಕೊಳ್ಳಿ. ಒಂದೇ ಸಲ ಎರಡು ರೀತಿಯ ಬಣ್ಣಗಳನ್ನು ತೆಗೆದುಕೊಳ್ಳಬೇಕು. ಮಾರುಕಟ್ಟೆಯಲ್ಲಿ ಸಿಗುವ ಫೆವಿಕ್ವಿಲ್ ಪೈಂಟ್ ಅನ್ನು ಬಳಸಿ ತಮಗೆ ಇಷ್ಟವೆನಿಸಿದ ಚಿತ್ತಾರವನ್ನು ಮಡಿಕೆ ಮೇಲೆ ಬಿಡಿಸಿ. ಈ ಚಿತ್ತಾರ ಮಾಡಬೇಕಾದರೆ ತಾಳ್ಮೆ, ಸಮಯಪ್ರಜ್ಞೆ ಇರುವುದು ಮುಖ್ಯ.

ಈ ರೀತಿಯ ಅಲಂಕಾರಿಕ ಮಡಿಕೆಗಳನ್ನು ಮನೆಯಲ್ಲಿ ಮನೆಯ ಅಂದವನ್ನು ಹೆಚ್ಚಿಸಲು ಪ್ರತಿಷ್ಠಾಪಿಸಬಹುದು. ಶಾಲಾ ಕಾರ್ಯಕ್ರಮಗಳಲ್ಲಿ ಜಾನಪದ ನೃತ್ಯ, ನಾಟಕ ಹೀಗೆ ಹಲವಾರು ಸನ್ನಿವೇಶಗಳಲ್ಲಿ ಕೂಡ ಬಳಸಬಹುದು. ಇದು ದೀರ್ಘಾವಧಿ ಬಾಳಿಕೆ ಬರುವುದರಿಂದ ಬಣ್ಣ ಬೇಗ ಮಾಸುವುದಿಲ್ಲ. ಕಲಾವಿದೆ ರಂಜನಾ ಅವರ ಪ್ರಕಾರ ಎಲ್ಲದರಲ್ಲೂ ಕಲೆಯಿದೆ. ಆದರೆ ಅದನ್ನು ಆಸ್ವಾದಿಸುವ, ಆಲೋಚಿಸುವ ಬುದ್ಧಿಮತ್ತೆ ಇರಬೇಕು. ಸಾಮಾನ್ಯ ವಸ್ತುವಿನಿಂದಲೂ ಕೂಡ ಅದ್ಭುತ ಕಲಾತ್ಮಕ ವಿಷಯಗಳನ್ನು ಹೊರಹೊಮ್ಮಿಸಬಹುದು. ಬಿಡುವಿನ ವೇಳೆಯಲ್ಲಿ ಈ ಕಲಾಕೃತಿ ಮಾಡುವುದರಲ್ಲಿ ತೊಡಗಿಸಿಕೊಂಡರೆ ಮಾನಸಿಕ ನೆಮ್ಮದಿಯನ್ನೂ ಪಡೆಯಬಹುದು.